ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಇ-ಆಡಳಿತ. ವರ್ಗಾವಣೆ /07/2020-21 ದಿ: 05/07/2021

**-: ಸುತ್ತೋಲೆ :-**

ವಿಷಯ : ಶಿಕ್ಷಕರ ವರ್ಗಾವಣೆ ತಂತ್ರಾಂಶದಲ್ಲಿ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳನ್ನು ಇಂದೀಕರಿಸುವ ಕುರಿತು.

ಉಲ್ಲೇಖ:1) ಈ ಕಛೇರಿ ಅಧಿಕೃತ ಜ್ಞಾಪನಾ ಸಮ ಸಂಖ್ಯೆ ದಿನಾಂಕ 11/11/2020 ಮತ್ತು 14/12/2020 ,12 / 01 /2021,17-03-2021

2) ಶಿಕ್ಷಕರ ವರ್ಗಾವಣೆ ಅಧಿಸೂಚನೆ ಸಂಖ್ಯೆ : ಶೀ.ವ.ಕೋ.ಶ.ಸಾ.ವ/01 /2020-21 ದಿನಾಂಕ 29/06/2021 ಮತ್ತು 30/07/2021

------------

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳು ಹಾಗು ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಎಲ್ಲಾ ಬೋಧಕ ವೃಂದದ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ಮಾಹಿತಿಯನ್ನು ವರ್ಗಾವಣೆ ತಂತ್ರಾಂಶ **(http://sts.karnataka.gov.in/TEACHERTRANSFER2020)** ದಲ್ಲಿ ಇಂದೀಕರಿಸಲಾಗಿತ್ತು, ಆದರೆ ಬಡ್ತಿ, ಪದೋನ್ನತಿ, ಅಕಾಲಿಕ ಮರಣ, ರಾಜೀನಾಮೆ, ನಿವೃತಿ ಇತ್ಯಾದಿ, ಸಕಾರಣಗಳಿಂದ EEDS ತಂತ್ರಾಂಶದಲ್ಲಿ ಮಾರ್ಪಾಡು ಆಗಿರುವ ಕಾರಣ, ವರ್ಗಾವಣೆ ತಂತ್ರಾಂಶದಲ್ಲಿ ಸದರಿ ಮಾಹಿತಿಯನ್ನು ದಿನಾಂಕ: 30/06/2021ರಲ್ಲಿದ್ದಂತೆ ಪರಿಶೀಲಿಸಿ, ಇಂದೀಕರಿಸಲು ವರ್ಗಾವಣೆ ತಂತ್ರಾಂಶದಲ್ಲಿ ಉಪನಿರ್ದೇಶಕರು, ಪ್ರಾಂಶುಪಾಲರು ಹಾಗೂ ಕಛೇರಿ ಮುಖ್ಯಸ್ಥರುಗಳ Loginಗಳಲ್ಲಿ ದಿನಾಂಕ:07/07/2021 ರವರೆಗೆ ಅವಕಾಶ ಕಲ್ಪಿಸಿದೆ.

ವರ್ಗಾವಣೆ ಸಂಬಂಧ ಶಾಲೆಗಳು ಮತ್ತು ವಿವಿಧ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತಿರುವ ಎಲ್ಲಾ ಬೋಧಕ ವೃಂದದ ಹುದ್ದೆಗಳ ಮಾಹಿತಿ ಅತ್ಯಂತ ಪ್ರಮುಖವಾಗಿರುತ್ತದೆ. ಅದ್ದರಿಂದ ಪ್ರತಿಯೊಬ್ಬ ಸಂಬಂದಿತ ಅಧಿಕಾರಿಯು ಖುದ್ದಾಗಿ ಪರಿಶೀಲಿಸಿ ದೃಢೀಕರಿಸಲು ಸೂಚಿಸಿದೆ. ಎಲ್ಲಾ ಮಾಹಿತಿ ಪರಿಶೀಲಿಸಿದ ನಂತರ ಕ್ರೋಡೀಕೃತ ವರದಿಯ ಮುದ್ರಿತ ಪ್ರತಿಯನ್ನು ಸಹಿ ಮಾಡಿ ದಿನಾಂಕ 07/07/2021 ರೊಳಗೆ Loginಗಳಲ್ಲಿ ಅಪ್ಲೋಡ ಮಾಡಲು ತಿಳಿಸಿದೆ.

ಒಂದು ವೇಳೆ ಮಾಹಿತಿಯನ್ನು ನಿಯಮಾನುಸಾರ ಇಂದೀಕರಿಸದ ಕಾರಣ ವರ್ಗಾವಣೆ ಪ್ರಕ್ರಿಯೆಯಲ್ಲಿ ತೊಂದರೆಗಳಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ನೇರಾ ಹೊಣೆಯಾಗುತ್ತಾರೆಂದು ತಿಳಿಯುವುದು. ಸಮಯಾವಕಾಶ ಕಡಿಮೆ ಇದ್ದು, ಕೊನೆ ದಿನಾಂಕದವರೆಗೆ ಕಾಯದೆ ಆದ್ಯತೆ ಮೇಲೆ ಸದರಿ ಕೆಲಸವನ್ನು ಪೂರ್ಣಗೂಳಿಸಲು ಮತ್ತೊಮ್ಮೆ ಸೂಚಿಸಿದೆ.

5/7/2021

ನಿರ್ದೇಶಕರು

ಇತರ ಪರೀಕ್ಷೆಗಳು ಹಾಗೂ

ವರ್ಗಾವಣಾ ಪ್ರಕ್ರಿಯೆ ನಿಯಂತ್ರಣಾಧಿಕಾರಿ

ಪ್ರತಿಯನ್ನು,

1) ಅಪರ ಆಯುಕ್ತರು, ಧಾರವಾಡ ಮತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ
2) ನಿರ್ದೇಶಕರು (ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ , ಬೆಂಗಳೂರು, ಇವರಿಗೆ ಮಾಹಿತಿಗಾಗಿ
3) ವಿಭಾಗಿಯ ಸಹ ನಿರ್ದೇಶಕರು,ಬೆಂಗಳೂರು, ಮೈಸೂರು,ಬೆಳಗಾವಿ,ಕಲ್ಬುರ್ಗಿ ಇವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
4) ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾ. ಶಿ. ಇ. ಇವರಿಗೆ ಸೂಕ್ತ ಕ್ರಮಕ್ಕಾಗಿ
5) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾ. ಶಿ. ಇ. ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
6) ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ , ಸಂಬಂಧಿಸಿದ ಬಿ.ಇ.ಒ. ಮುಖಾಂತರ
7) ಕಛೇರಿ ಪ್ರತಿ